**All India Radio: Bangalore**
**National Bulletin In Kannada**
**31.12.2025  1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**31.12.2025  1.10 p.m.**
**<><><><>**

ಮುಖ್ಯಾಂಶಗಳು

1. ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯಿಂದ ೧೦ ಮತ್ತು ೧೨ನೇ ಬೋರ್ಡ್ ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿ ಪ್ರಕಟ
2. 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮಕ್ಕೆ ದಾಖಲೆ ಮೂರು ಕೋಟಿಗೂ ಹೆಚ್ಚು ನೋಂದಣಿ
3. ಅಫ್ಘಾನಿಸ್ತಾನಕ್ಕೆ ೧.೭೧ ಶತಕೋಟಿ ಅಮೆರಿಕ ಡಾಲರ್ ಮಾನವೀಯ ನೆರವಿನ ಪ್ಯಾಕೇಜ್ ನೀಡಿದ ವಿಶ್ವಸಂಸ್ಥೆ
4. ಫಿಡೆ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಶಿಪ್: ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿಗೆ ಕಂಚಿನ ಪದಕ: ಪ್ರಧಾನಿ ಅಭಿನಂದನೆ

<><><><>

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ-ಸಿಬಿಎಸ್‌ಇ, ೧೦ ಮತ್ತು ೧೨ನೇ ತರಗತಿಯ ಬೋರ್ಡ್ ಪರೀಕ್ಷೆಗಳ ಪರಿಷ್ಕೃತ ದಿನಾಂಕಗಳನ್ನು ಪ್ರಕಟಿಸಿದೆ. ಸಿಬಿಎಸ್‌ಇ ಪ್ರಕಾರ, ೧೦ನೇ ತರಗತಿಯ ವಿದ್ಯಾರ್ಥಿಗಳ ಪರೀಕ್ಷೆಯನ್ನು ಈ ಹಿಂದೆ ಮುಂದಿನ ವರ್ಷದ ಮಾರ್ಚ್ ೩ ರಂದು ನಿಗದಿಪಡಿಸಲಾಗಿತ್ತು, ಆದರೀಗ ಪರೀಕ್ಷೆಯನ್ನು ಮಾರ್ಚ್ ೧೧ ರಂದು ನಡೆಸಲು ನಿರ್ಧರಿಸಲಾಗಿದೆ. ೧೨ನೇ ತರಗತಿಯ ಪರೀಕ್ಷೆಯನ್ನು ಏಪ್ರಿಲ್ ೧೦ಕ್ಕೆ ಮುಂದೂಡಾಲಗಿದೆ. ಈ ಹಿಂದೆ ಮಾರ್ಚ್ ೩ ರಂದು ಪರೀಕ್ಷೆ ನಿಗದಿಯಾಗಿತ್ತು. ಆಡಳಿತಾತ್ಮಕ ಕಾರಣಗಳಿಂದಾಗಿ ಪರೀಕ್ಷಾ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ಈ ಕುರಿತಂತೆ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾಹಿತಿ ನೀಡುವಂತೆ ಎಲ್ಲಾ ಶಾಲೆಗಳಿಗೆ ಮಂಡಳಿ ಸೂಚಿಸಿದೆ.

<><><><>

ಪ್ರಧಾನಿ ನರೇಂದ್ರ ಮೋದಿಯವರ ಪ್ರಮುಖ ಉಪಕ್ರಮವಾದ ಪರೀಕ್ಷಾ ಪೆ ಚರ್ಚಾ ನಿನ್ನೆಯವರೆಗೆ ಮೂರು ಕೋಟಿಗೂ ಹೆಚ್ಚು ನೋಂದಣಿಗಳು ದಾಖಲಿಸಿ, ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ.

ಭಾಗವಹಿಸುವಿಕೆಯ ಈ ಪ್ರಮಾಣ ಪರೀಕ್ಷಾ ಪೆ ಚರ್ಚಾ, ಒಂದು ಜನಾಂದೋಲನವಾಗಿರುವುದನ್ನು ತೋರಿಸುತ್ತದೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ. ದೇಶಾದ್ಯಂತದ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ, ಇದು ಕಾರ್ಯಕ್ರಮದ ಹೆಚ್ಚುತ್ತಿರುವ ಜನಪ್ರಿಯತೆಯನ್ನು ಪ್ರತಿಬಿಂಬಿಸುತ್ತದೆ. ಈ ಉಪಕ್ರಮವು ವಿದ್ಯಾರ್ಥಿಗಳ ಮಾನಸಿಕ ಯೋಗಕ್ಷೇಮದ ಮೇಲೆ ಕೇಂದ್ರೀಕರಿಸುವ ಜೊತೆಗೆ ಪರೀಕ್ಷೆಗಳ ಕಡೆಗೆ ಸಕಾರಾತ್ಮಕ ವಿಧಾನವನ್ನು ಉತ್ತೇಜಿಸುತ್ತದೆ.

<><><><>

೨೦೨೫ ಭಾರತದ ಅಭಿವೃದ್ಧಿ ಪಯಣದಲ್ಲಿ ಅತ್ಯಂತ ನಿರ್ಣಾಯಕ ವರ್ಷವಾಗಿದೆ. ಈ ವರ್ಷ ಹಲವು ನೀತಿಗಳು ಪ್ರಗತಿಯಾಗಿ ಮತ್ತು ಉದ್ದೇಶಗಳು ಪರಿಣಾಮವಾಗಿ ಪರಿವರ್ತನೆಗೊಂಡ ವರ್ಷವಾಗಿದೆ. ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ 'ಸುಧಾರಣೆಗಳ ವರ್ಷ' ಸರಣಿಯಲ್ಲಿ ಇಂದು ೨೦೨೫ರಲ್ಲಿ ಉತ್ಪಾದನಾ ವಲಯದಲ್ಲಿ ಆಗಿರುವ ಭಾರತದ ಪ್ರಗತಿಯನ್ನು ಪ್ರಮುಖವಾಗಿ ಪ್ರಸ್ತುತಪಡಿಸಲಾಗುತ್ತಿದೆ.

ಈ ಕುರಿತು ಒಂದು ವರದಿ:

ಈ ವರ್ಷ ಭಾರತವು ತನ್ನ ಕೈಗಾರಿಕಾ ಮತ್ತು ಆರ್ಥಿಕ ಪಥದಲ್ಲಿ ಶೇಕಡಾ ೬.೮ ರಷ್ಟು ಪ್ರಗತಿಯನ್ನು ಸಾಧಿಸುವ ಮೂಲಕ ಒಂದು ನಿರ್ಣಾಯಕ ಹಂತವನ್ನು ತಲುಪಿದೆ. ಹೆಚ್ಚುತ್ತಿರುವ ವಿದೇಶಿ ನೇರ ಹೂಡಿಕೆ ಮತ್ತು ವಿಸ್ತರಿಸುತ್ತಿರುವ ಕೈಗಾರಿಕಾ ಸಾಮರ್ಥ್ಯದೊಂದಿಗೆ, ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ಪ್ರಬಲ ಉತ್ಪಾದನಾ ಕೇಂದ್ರವಾಗಿ ಗುರುತಿಸಿಕೊಂಡಿದೆ. ಇಂಧನ ಕ್ಷೇತ್ರದಲ್ಲಿ ಭಾರತವು ಮೈಲಿಗಲ್ಲು ಸ್ಥಾಪಿಸಿದೆ. ೨೦೧೪ರಲ್ಲಿ ಕೇವಲ ೨.೩ ಗಿಗಾವ್ಯಾಟ್ ಇದ್ದ ಸೌರ ಮಾಡ್ಯೂಲ್ ಉತ್ಪಾದನಾ ಸಾಮರ್ಥ್ಯವು, ೨೦೨೫ರ ವೇಳೆಗೆ ೧೦೦ ಗಿಗಾವ್ಯಾಟ್‌ಗೆ ಏರಿದೆ. ಭಾರತವು ೨೦೩೦ರ ವೇಳೆಗೆ ಸಾಧಿಸಬೇಕಿದ್ದ ಶೇಕಡಾ ೫೦ರಷ್ಟು ಶುದ್ಧ ಇಂಧನದ ಗುರಿಯನ್ನು ಐದು ವರ್ಷಗಳ ಮುಂಚಿತವಾಗಿ, ಅಂದರೆ ೨೦೨೫ರಲ್ಲೇ ಸಾಧಿಸಲಾಗಿದೆ. ಈ ಸಾಧನೆಯು ಪರಿಸರ ರಕ್ಷಣೆ ಮತ್ತು ಇಂಧನ ಸ್ವಾವಲಂಬನೆಯತ್ತ ಭಾರತಕ್ಕಿರುವ ಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಈ ವರ್ಷ ಜಾರಿಗೆ ಬಂದ 'ಜಿಎಸ್‌ಟಿ ೨.೦' ಮೂಲಕ ತೆರಿಗೆ ವ್ಯವಸ್ಥೆಯನ್ನು ತರ್ಕಬದ್ಧಗೊಳಿಸುವಿಕೆ ಮತ್ತು ಸುಲಭ ಅನುಸರಣಾ ಪ್ರಕ್ರಿಯೆಗಳು ತಯಾರಕರ ಮೇಲಿನ

ಹೊರೆಯನ್ನು ಕಡಿಮೆ ಮಾಡಿವೆ. ದಿಟ್ಟ ನೀತಿಗಳು ಮತ್ತು ಕೌಶಲ್ಯಪೂರ್ಣ ಕಾರ್ಯಪಡೆಯೊಂದಿಗೆ ಭಾರತವು ಇಂದು ವಿಶ್ವದ ಪ್ರಮುಖ ಉತ್ಪಾದನಾ ಮತ್ತು ರಫ್ತು ಆರ್ಥಿಕತೆಯಾಗಿ ಬೆಳೆಯುತ್ತಿದೆ. ಜಾಗತಿಕ ಪಾಲುದಾರಿಕೆಯ ವಿಸ್ತರಣೆಯೊಂದಿಗೆ, ಭಾರತವು ಸಮೃದ್ಧ ಮತ್ತು ವಿಕಸಿತ ರಾಷ್ಟ್ರವಾಗುವತ್ತ ದಾಪುಗಾಲಿಡುತ್ತಿದೆ.

<><><><>

ಡಿಜಿಟಲ್ ವಾಣಿಜ್ಯಕ್ಕಾಗಿ ಮುಕ್ತ ಜಾಲ-ಒಎನ್‌ಡಿಸಿ, ಡಿಜಿಟಲ್ ವಾಣಿಜ್ಯವನ್ನು ಎಲ್ಲರಿಗೂ ಕೈಗೆಟಕುವಂತೆ ಮಾಡುವ ಮೂಲಕ ದೇಶದ ಇ-ವಾಣಿಜ್ಯ ಜಾಲವನ್ನು ಪರಿವರ್ತಿಸುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಸಚಿವರು, ಕಳೆದ ನಾಲ್ಕು ವರ್ಷಗಳಲ್ಲಿ ಮುಕ್ತ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುವ ಮೂಲಕ ಹಾಗೂ ನಾವೀನ್ಯತೆ ಮತ್ತು ಸಹಯೋಗವನ್ನು ಬೆಳೆಸುವ ಮೂಲಕ ಒಎನ್‌ಡಿಸಿ ಉತ್ಪನ್ನಗಳು ಮತ್ತು ಸೇವೆಗಳಲ್ಲಿ ಇ-ವಾಣಿಜ್ಯವನ್ನು ಸುಗಮಗೊಳಿಸಿದೆ ಎಂದು ತಿಳಿಸಿದ್ದಾರೆ.

<><><><>

೨೦೨೬ ರಲ್ಲಿ ಅಫ್ಘಾನಿಸ್ತಾನವು ವಿಶ್ವದ ಅತಿದೊಡ್ಡ ಮಾನವೀಯ ಬಿಕ್ಕಟ್ಟುಗಳಲ್ಲಿ ಒಂದಾಗಿ ಉಳಿಯುವ ನಿರೀಕ್ಷೆಯಿರುವುದರಿಂದ, ವಿಶ್ವಸಂಸ್ಥೆ ೧.೭೧ ಶತಕೋಟಿ ಅಮೆರಿಕ ಡಾಲರ್‌ಗಳ ಮಾನವೀಯ ನೆರವಿನ ಪ್ಯಾಕೇಜ್ ಅನ್ನು ಪ್ರಾರಂಭಿಸಿದೆ. ಸುಮಾರು ೨೧.೯ ದಶಲಕ್ಷ ಜನರಿಗೆ ಸಹಾಯದ ಅಗತ್ಯವಿದ್ದು, ೧೭.೪ ದಶಲಕ್ಷ ಜನರು ತೀವ್ರ ಆಹಾರ ಅಭದ್ರತೆಯನ್ನು ಎದುರಿಸುತ್ತಿದ್ದಾರೆ, ಈ ಯೋಜನೆಯು ಆಹಾರ, ಆರೋಗ್ಯ ರಕ್ಷಣೆ, ಆಶ್ರಯ, ನೀರು, ಪೋಷಣೆ ಮತ್ತು ನಗದು ಬೆಂಬಲದ ಮೂಲಕ ಲಕ್ಷಾಂತರ ಜನರಿಗೆ ಸಹಾಯ ಮಾಡುವ ಗುರಿಯನ್ನು ಹೊಂದಿದೆ.

<><><><>

ಬಾಂಗ್ಲಾದೇಶದ ಮಾಜಿ ಪ್ರಧಾನಿ ಮತ್ತು ಬಾಂಗ್ಲಾದೇಶ ರಾಷ್ಟ್ರೀಯವಾದಿ ಪಕ್ಷದ ಅಧ್ಯಕ್ಷೆ ಬೇಗಂ ಖಲೀದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಇಂದು ಬೆಳಿಗ್ಗೆ ಢಾಕಾಗೆ ಆಗಮಿಸಿದರು. ಡಾ. ಜೈಶಂಕರ್ ಅವರನ್ನು ಬಾಂಗ್ಲಾದೇಶದ ಭಾರತೀಯ ಹೈಕಮಿಷನರ್ ಪ್ರಣಯ್ ವರ್ಮಾ ಮತ್ತು ಭಾರತೀಯ

ಹೈಕಮಿಷನ್‌ನ ಇತರ ಹಿರಿಯ ಅಧಿಕಾರಿಗಳು ಬರಮಾಡಿಕೊಂಡರು. ಖಲೀದಾ ಜಿಯಾ ಅವರ ಅಂತ್ಯಕ್ರಿಯೆ ಮಧ್ಯಾಹ್ನ ೨ ಗಂಟೆಗೆ ರಾಜಧಾನಿಯ ಮಾಣಿಕ್ ಮಿಯಾ ಅವೆನ್ಯೂದಲ್ಲಿ ನಡೆಯಲಿದೆ. ವಿದೇಶಿ ಗಣ್ಯರು, ರಾಜಕೀಯ ಮುಖಂಡರು ಮತ್ತು ಹಲವಾರು ದೇಶಗಳ ಪ್ರತಿನಿಧಿಗಳು ದಿವಂಗತ ಮಾಜಿ ಪ್ರಧಾನಿಗೆ ಅಂತಿಮ ನಮನ ಸಲ್ಲಿಸಲು ಅಂತ್ಯಕ್ರಿಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

<><><>

ಭಾರತ, ಚೀನಾ, ವಿಯೆಟ್ನಾಂ, ಫಿಲಿಪೈನ್ಸ್, ಇಂಡೋನೇಷ್ಯಾ ಮತ್ತು ಕಾಂಬೋಡಿಯಾದ ಗುಂಪು ಪ್ರವಾಸಿಗರಿಗೆ ವೀಸಾ ಪ್ರಕ್ರಿಯಾ ಶುಲ್ಕದ ಮೇಲಿನ ವಿನಾಯಿತಿಯನ್ನು ದಕ್ಷಿಣ ಕೊರಿಯಾ ಹೆಚ್ಚುವರಿಯಾಗಿ ಆರು ತಿಂಗಳವರೆಗೆ ವಿಸ್ತರಿಸಲಿದೆ. ದಕ್ಷಿಣ ಕೊರಿಯಾದ ಹಣಕಾಸು ಸಚಿವ ಕೂ ಯುನ್-ಚಿಯೋಲ್ ಅವರು, ಸಿ-೩-೨ ವೀಸಾಗಳಿಗೆ ಶುಲ್ಕ ವಿನಾಯಿತಿ ಮುಂದಿನ ವರ್ಷದ ಜೂನ್ ಅಂತ್ಯದವರೆಗೆ ಮುಂದುವರಿಯಲಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು ಈ ಕ್ರಮದ ಉದ್ದೇಶವಾಗಿದೆ ಎಂದು ಹೇಳಿದ್ದಾರೆ. ಪ್ರಸ್ತುತ, ಸಿ-೩-೨ ವೀಸಾಗಳಿಗೆ ಪ್ರಕ್ರಿಯಾ ಶುಲ್ಕವನ್ನು ೧೮ ಸಾವಿರ ವಾನ್‌ಗಳಿಗೆ ನಿಗದಿಪಡಿಸಲಾಗಿದೆ. ಈ ನಡುವೆ, ದಕ್ಷಿಣ ಕೊರಿಯಾಕ್ಕೆ ವಿದೇಶಿ ಸಂದರ್ಶಕರ ಸಂಖ್ಯೆ ನವೆಂಬರ್‌ನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇಕಡಾ ೧೭.೩ ರಷ್ಟು ಹೆಚ್ಚಾಗಿದೆ. ವರದಿಗಳ ಪ್ರಕಾರ, ಚೀನಾದಿಂದ ಅತಿ ಹೆಚ್ಚು ಪ್ರವಾಸಿಗರು ಆಗಮಿಸುತ್ತಿದ್ದಾರೆ. ಜಪಾನ್, ತೈವಾನ್, ಅಮೆರಿಕ ಮತ್ತು ಫಿಲಿಪೈನ್ಸ್ ನಂತರದ ಸ್ಥಾನದಲ್ಲಿವೆ.

<><><>

ಈ ವರ್ಷ ಕೇಂದ್ರ ಸರ್ಕಾರ, ಹಲವಾರು ಮಹತ್ವದ ಸುಧಾರಣೆಗಳನ್ನು ಕೈಗೊಂಡಿದ್ದು, ಇದು ದೇಶದ ೨೦೪೭ ರ ವಿಕಸಿತ ಭಾರತದೆಡೆಗಿನ ಪಯಣದಲ್ಲಿ ಪ್ರಮುಖ ಅಧ್ಯಾಯಗಳನ್ನು ಗುರುತಿಸುತ್ತದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ಹೇಳಿದ್ದಾರೆ. ನವದೆಹಲಿಯಲ್ಲಿ ಭಾರತ ಸರ್ಕಾರದ ೨೦೨೬ ರ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಿ ಮಾತನಾಡಿದ ಸಚಿವರು, ಈ ಸುಧಾರಣೆಗಳು ಸಮಗ್ರ ಬೆಳವಣಿಗೆಯನ್ನು ಖಚಿತಪಡಿಸುವುದು, ಆರ್ಥಿಕ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು ಹಾಗೂ ದೇಶದ ದೀರ್ಘಕಾಲೀನ ಅಭಿವೃದ್ಧಿಗೆ ಸುಸ್ಥಿರ ಅಡಿಪಾಯವನ್ನು ಹಾಕುವ ಉದ್ದೇಶದಿಂದ ಮಾರ್ಗದರ್ಶಿಸಲ್ಪಟ್ಟಿವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಾಹಿತಿ ಮತ್ತು ಪ್ರಸಾರ ಕಾರ್ಯದರ್ಶಿ ಸಂಜಯ್ ಜಾಜು, ಕ್ಯಾಲೆಂಡರ್‌ನ ವಿನ್ಯಾಸವನ್ನು ಬಹಳ ಎಚ್ಚರಿಕೆಯಿಂದ

ನಿರ್ವಹಿಸಲಾಗಿದೆ ಮತ್ತು ಇದು ಕೇಂದ್ರ ಸರ್ಕಾರದ ಆದ್ಯತೆಗಳನ್ನು ವಿವರಿಸುತ್ತದೆ ಎಂದು ಹೇಳಿದರು.

<><><><>

ದೋಹಾದಲ್ಲಿ ನಡೆದ ಫಿಡೆ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಕಂಚಿನ ಪದಕ ಗೆದ್ದಿದ್ದಾರೆ. ನಿನ್ನೆ ನಡೆದ ಚೆಸ್ ಪಂದ್ಯಾವಳಿಯ ಸೆಮಿಫೈನಲ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ, ಉಜ್ಬೆಕಿಸ್ತಾನದ ಅಗ್ರ ಆಟಗಾರ ನೋಡಿರ್ಬೆಕ್ ಅಬ್ದುಸತ್ತೊರೊವ್ ವಿರುದ್ಧ ಪರಾಭವಗೊಂಡು, ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡರು. ಮತ್ತೊಂದು ಸೆಮಿಫೈನಲ್‌ನಲ್ಲಿ, ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್ಸನ್ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರನ್ನು ೩-೧ ಅಂತರದಿಂದ ಸೋಲಿಸಿದ್ದು, ಅಬ್ದುಸತ್ತೊರೊವ್ ಅವರೊಂದಿಗೆ ಪ್ರಶಸ್ತಿ ಹಣಾಹಣಿಯಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಕಂಚಿನ ಪದಕ ಗೆದ್ದ ಅರ್ಜುನ್ ಎರಿಗೈಸಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ, ಎರಿಗೈಸಿ ಅವರ ಕೌಶಲ್ಯ, ತಾಳ್ಮೆ ಮತ್ತು ಉತ್ಸಾಹ ಅನುಕರಣೀಯವಾಗಿದೆ. ಈ ಯಶಸ್ಸು ಯುವಕರಿಗೆ ಸ್ಫೂರ್ತಿದಾಯಕವಾಗಿರುತ್ತದೆ ಎಂದು ಹೇಳಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>